## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1058 |
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು |
| ಉತ್ತರಿಸುವ ದಿನಾಂಕ | 20.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

********

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಮುಜರಾಯಿ ದೇವಸ್ಥಾನಗಳ ಸಂಖ್ಯೆಯೆಷ್ಟು; ಸದರಿ ದೇವಸ್ಥಾನಗಳು ಎಷ್ಟು ವಿಸ್ತೀರ್ಣದ ಜಾಗವನ್ನು ಹೊಂದಿದೆ; | ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34,566 ದೇವಸ್ಥಾನಗಳು ಒಳಪಟ್ಟಿರುತ್ತವೆ ವಿವರಗಳು ಈ ಕೆಳಕಂಡಂತಿವೆ:<br>1 - ಎ - 205<br>2 - ಬಿ - 193<br>3 - ಸಿ - 34168<br>ಸದರಿ ದೇವಸ್ಥಾನಗಳು ಪ್ರಸ್ತುತ 37452 ಎಕರೆ 28.8 ಗುಂಟೆ ವಿಸ್ತೀರ್ಣದ ಜಾಗವನ್ನು ಹೊಂದಿದ್ದು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಮುಜರಾಯಿ ಇಲಾಖೆಯು ಎಷ್ಟು ಆಸ್ತಿಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆ ನೀಡಿದೆ; ಇದಕ್ಕೆ ನಿಗದಿಪಡಿಸಿರುವ ಹಣವೆಷ್ಟು? ಪ್ರತಿವರ್ಷ ಇದರಿಂದ ಎಷ್ಟು ಆದಾಯ ಬರುತ್ತಿದೆ? | ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಒಟ್ಟು1,926 ಅಂಗಡಿ, 315 ಕಟ್ಟಡ, 62 ಅತಿಥಿಗೃಹ, 7 ವಿದ್ಯಾಸಂಸ್ಥೆ, 2 ಪಾರ್ಕಿಂಗ್ ಜಾಗ ಮತ್ತು 135 ಎಕರೆ 20 ಗುಂಟೆ ಜಮೀನನ್ನು ಹಾಗೂ 65 ಖಾಲಿ ಜಾಗವನ್ನು ಗುತ್ತಿಗೆಗೆ ನೀಡಲಾಗಿದೆ.<br><br>ಸದರಿ ಗುತ್ತಿಗೆ ಬಾಡಿಗೆ ವಸೂಲಾತಿಯನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 31ರನ್ವಯ ನಿಗದಿಪಡಿಸಲಾದ ಬಾಡಿಗೆ ಮೊತ್ತಕ್ಕೆ ವಾರ್ಷಿಕ ಶೇಕಡ 10 ರಷ್ಟು ಹೆಚ್ಚಿಸಿ ವಸೂಲಿಸಬೇಕಾಗಿರುತ್ತದೆ. ಅದರಂತೆ ಪ್ರಸಕ್ತ ರೂ.20,42,64,026-00 ಗಳ ಆದಾಯ ಬಂದಿದ್ದು ಈ ಮೊತ್ತವು ವರ್ಷದಿಂದ ವರ್ಷಕ್ಕೆ ವ್ಯತ್ಯಾಸ ವಾಗುತ್ತದೆ. **(ವಿವರ ಅನುಬಂಧ-2 ರಲ್ಲಿ ಒದಗಿಸಿದೆ)** |
| ಇ) | ಇಲಾಖೆಯ ಆಸ್ತಿಯನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇದರ ಒಟ್ಟು ಮೌಲ್ಯವೆಷ್ಟು; | ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಿಗೆ ಸೇರಿದ ಸ್ಥಿರ ಸ್ವತ್ತುಗಳನ್ನು ಸಂರಕ್ಷಣೆ ಮಾಡಲು ಮತ್ತು ಸ್ವತ್ತಿನಲ್ಲಿ ಅನಧಿಕೃತದಾರರನ್ನು ತೆರವುಗೊಳಿಸಿ ದೇವಾಲಯದ ಆಸ್ತಿಯನ್ನು ಹಿಂಪಡೆಯುವ ಉದ್ದೇಶದಿಂದ ಅನಧಿಕೃತ ಒತ್ತುವರಿಗಳನು ಗುರುತಿಸಿ, ಅವುಗಳನ್ನು ತೆರವುಗೊಳಿಸಿ |

| ಪ್ರಶ್ನೆ | | ಉತ್ತರ |
|---|---|---|
| | (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) | ನಿಯಮಾನುಸಾರ ಕ್ರಮಗೊಳ್ಳಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳ ಕಾರ್ಯಲಯಕ್ಕೆ ಸೂಚನೆ ನೀಡಲಾಗಿದ್ದು, ಸದರಿ ಸ್ವತ್ತುಗಳ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಿಗೆ ಸೇರಿದ ಆಸ್ತಿಯನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆ ಒಟ್ಟು 239 ಗಳಾಗಿದ್ದು, ಒತ್ತುವರಿ ವಿಸ್ತೀರ್ಣ 923 ಎಕರೆ ಆಗಿರುತ್ತದೆ. ವಿವರವನ್ನು **ಅನುಬಂಧ-3 ರಲ್ಲಿ** ಒದಗಿಸಿದೆ.<br><br>ರಾಜ್ಯಾದ್ಯಂತ ಇರುವ ಅಧಿಸೂಚಿತ ದೇವಾಲಯದ ಸ್ವತ್ತುಗಳು ಆಯಾಯ ಜಿಲ್ಲೆಯಲ್ಲಿನ ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ನಗರಸಭೆ/ ಮಹಾನಗರ ಪಾಲಿಕೆ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ ಸದರಿ ವ್ಯಾಪ್ತಿಯಲ್ಲಿ ಇರುವ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ (ಖಾಲಿಜಾಗ/ ನಿವೇಶನ/ ಕಟ್ಟಡ/ ಮಳಿಗೆಗಳು/ ಕಲ್ಯಾಣ ಮಂಟಪ/ ಸಮುದಾಯ ಭವನ/ ಅತಿಥಿ ಗೃಹಗಳು ಇತ್ಯಾದಿ) ಮೌಲ್ಯ ನಿರ್ದರಣೆಯನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಿಗಳು (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ರವರಿಂದ ನಿರ್ಧರಿಸಲ್ಪಡುವುದರಿಂದ, ಅಲ್ಲದೇ ಕಾಲಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆಯಾಗುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 34566 ಮುಜರಾಯಿ ದೇವಾಲಯಗಳ ಸ್ವತ್ತುಗಳ ಮೌಲ್ಯಗಳ ನಿಖರ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.<br><br>2025 ಸಾಲಿನ ಜುಲೈ ಅಂತ್ಯದವರೆಗೆ 20730 ದೇವಾಲಯ / ದೇವಾಲಯದ ಆಸ್ತಿಗಳ ಖಾತೆ ಇಂಡೀಕರಿಸ ಲಾಗಿದ್ದು, 23793 ಸ್ಥಿರಾಸ್ತಿಗಳನ್ನು ದೇವಾಲಯದ ಹೆಸರಿಗೆ ಖಾತೆ ಮಾಡಲು ಬಾಕಿ ಇರುತ್ತದೆ.<br><br>ಬಾಕಿ ಉಳಿದ ಆಸ್ತಿಗಳನ್ನು ಪಹಣಿಯಲ್ಲಿ ತ್ವರಿತವಾಗಿ ಇಂಡೀಕರಣ ಮಾಡುವಂತೆ ಜಿಲ್ಲೆಯ ಜಿಲ್ಲಾಧಿಕಾರಿಗಳ/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರಿಗೆ ನಿರ್ದೇಶನ ನೀಡಲಾಗಿರುತ್ತದೆ. |

| ಪ್ರಶ್ನೆ | | ಉತ್ತರ |
|---|---|---|
| ಈ) | ಒತ್ತುವರಿಯಾಗಿರುವ ಜಮೀನುಗಳ ಪೈಕಿ ಇದುವರೆಗೂ ಎಷ್ಟು ಆಸ್ತಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ;<br>ಇನ್ನು ಎಷ್ಟು ಬಾಕಿ ಉಳಿದಿದೆ; | ಬೆಂಗಳೂರಿನ ಮಲ್ಲೇಶ್ವರಂ ನಿವಾಸಿಯಾದ ಶ್ರೀಮತಿ ದ್ವಾರಾಕಾಬಾಯಿ ವೇದಾಂತಂ ರವರು ಈ ಹಿಂದಿನ ಮಾಗಡಿ ತಾಲ್ಲೂಕು, ಹಾಲಿ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಸೇರಿದ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನ ಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ, ಮತ್ತು ಕಾಡುಕರೇನಹಳ್ಳಿ (ಕುರುಬರಹಳ್ಳಿ) ಈ ಗ್ರಾಮಗಳಿಗೆ ಸೇರಿದ ಒಟ್ಟು 1198-34 ಎಕರೆ-ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ.<br><br>ಚೋಳನಾಯಕನಹಳ್ಳಿ ಗ್ರಾಮದ ಒಟ್ಟು 287-09 ಎಕರೆ-ಗುಂಟೆ ಜಮೀನಿನ ಪೈಕಿ 48.33 ಎಕರೆ-ಗುಂಟೆ ವಿಸ್ತೀರ್ಣದ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಿ ಶ್ರೀ ರಂಗನಾಥ ಸ್ವಾಮಿ ದೇವಾಲಯದ ಹೆಸರಿಗೆ ಆರ್.ಟಿ.ಸಿಯನ್ನು ಇಂಡೀಕರಣ ಮಾಡಿ ಫೆನ್‌ಸಿಂಗ್ ಹಾಕಲಾಗಿದೆ.<br><br>ಬೆಂಗಳೂರು ನಗರ ಆಲಸೂರು ಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79ರಲ್ಲಿ 15-12 ಎಕರೆ/ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ಈ ಪೈಕಿ ಖಾಲಿ ಜಾಗದಲ್ಲಿ ನಿರ್ಮಿಸಲಾದ ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸಿ, ಸುಮಾರು 9-00 ಎಕರೆ ವಿಸ್ತೀರ್ಣದ ಖಾಲಿ ಜಾಗದಲ್ಲಿ ಕಾಂಪೌಂಡ್ ನಿರ್ಮಿಸಲಾಗುತ್ತಿದೆ. ಹಾಗೂ ಉಳಿಕೆ ಪ್ರದೇಶದ ವಿಸ್ತೀರ್ಣದಲ್ಲಿರುವ ಒಟ್ಟು 204 ಜನ ಅನಧಿಕೃತ ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ವಿಚಾರಣೆ ಹಂತದಲ್ಲಿ ಇರುತ್ತದೆ.<br><br>ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರಂ ಹೋಬಳಿ, ಚಳ್ಳಕೆರೆ ಗ್ರಾಮದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಾಲಯಕ್ಕೆ ಸೇರಿದ ಸರ್ವೆ ನಂಬರ್ 59ರ 1-05 ಎಕರೆ-ಗುಂಟೆ ಜಮೀನಿನ ಒತ್ತುವರಿ ಯನ್ನು ತೆರವುಗೊಳಿಸಲಾಗಿರುತ್ತದೆ<br><br>ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ಸೇರಿದ ಸ್ಥಿರ ಸ್ವತ್ತುಗಳ ಸರ್ವೆ ಕಾರ್ಯವು ಪ್ರಗತಿಯಲ್ಲಿದ್ದು ದೇವಾಲಯಕ್ಕೆ ಸೇರಿದ ಸ್ವತ್ತುಗಳು ಒತ್ತುವರಿಯಾಗಿರುವುದು ಕಂಡು ಬಂದಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಕಾನೂನು ರೀತ್ಯಾ ಕ್ರಮವಹಿಸಲಾಗುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| ಉ) | ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ರಾಜ ಮಹಾರಾಜರ ಕಾಲದಿಂದಲೂ ನಾನಾ ಸಂದರ್ಭಗಳಲ್ಲಿ ದಾನದ ರೂಪದಲ್ಲಿ ಹಾಗೂ ಇನಾಮು ರೂಪದಲ್ಲಿ ಬಂದಿರುವ ಆಸ್ತಿಗಳೆಷ್ಟು; (ವಿವರಗಳನ್ನು ಒದಗಿಸುವುದು)<br>ಇವುಗಳು ಕಂದಾಯ ಇಲಾಖೆಯ ದಾಖಲೆಗಳಲ್ಲಿ ನಮೂದಾಗಿದೆಯೇ? | ಮೈಸೂರು (ಧಾರ್ಮಿಕ ಮತ್ತು ಧರ್ಮಾರ್ಥ) ಇನಾಂ ಜಮೀನುಗಳ ರದ್ಧತಿ ಕಾಯ್ದೆ 1955 ಹಾಗೂ ಕರ್ನಾಟಕ ಭೂ ಸುಧಾರಣೆ ಕಾಯ್ದೆಯು 1961ರಲ್ಲಿ ಜಾರಿಯಾಗಿರುತ್ತದೆ. ಸದರಿ ಕಾಯ್ದೆಗಳ ಅಡಿಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳ/ ಧಾರ್ಮಿಕ ಸಂಸ್ಥೆಗಳ ಬಹುತೇಕ ಇನಾಂ ಜಮೀನುಗಳು ಮತ್ತು ಇನಾಂಯೇತರ ಜಮೀನುಗಳು ಸರ್ಕಾರದಲ್ಲಿ ವಿಹಿತವಾಗಿದ್ದು, ಈ ಜಮೀನುಗಳನ್ನು ಭೂ ನ್ಯಾಯ ಮಂಡಳಿಗಳ ಮೂಲಕ ಅಧಿಭೋಗದಾರರಿಗೆ ಭೂ ಮಂಜೂರಾತಿ ಮಾಡಲಾಗಿರುತ್ತದೆ. ಈ ಭೂ ನ್ಯಾಯ ಮಂಡಳಿಗಳ ಅಧ್ಯಕ್ಷರು ಆಯಾಯ ಉಪವಿಭಾಗಗಳ ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಗಳು ಆಗಿದ್ದು ಸಂಬಂಧಪಟ್ಟ ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸಲು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. |

ಸಂಖ್ಯೆ: ಕಂಇ 182 ಮುಸಪು 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ - 1

## ಮುಜರಾಯಿ ದೇವಾಲಯಗಳ ವಿವರ

| | ಮುಜರಾಯಿದೇವಾಲಯಗಳಸಂಖ್ಯೆ | | | | | | ದೇವಾಲಯ ಆಸ್ತಿಗಳ ಒಟ್ಟು ವಿಸ್ತೀರ್ಣ | | | | | | | |
|---|---|---|---|---|---|---|---|---|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆ | ಜಿಲ್ಲೆಯಲ್ಲಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆ | A | B | C | ಒಟ್ಟು ದೇವಾಲಯಗಳ ಸಂಖ್ಯೆ | A | | B | | C | | ಒಟ್ಟು | |
| | | | | | | | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎ | ಗು |
| 1 | ಬೆಂಗಳೂರು ನಗರ | 5 | 21 | 16 | 1067 | **1104** | 114 | 10.5 | 59 | 18.25 | 432 | 19.5 | 605 | 48.25 |
| 2 | ಬೆಂಗಳೂರು ಗ್ರಾಮಾಂತರ | 4 | 3 | 5 | 1132 | **1140** | 907 | 18.75 | 48 | 32.5 | 298 | 29 | 1253 | 80.25 |
| 3 | ರಾಮನಗರ | 4 | 7 | 5 | 855 | **867** | 98 | 37.75 | 60 | | 843 | 25 | 1001 | 62.75 |
| 4 | ಚಿಕ್ಕಬಳ್ಳಾಪುರ | 8 | 3 | 4 | 1065 | **1072** | 36 | 18 | 198 | 10 | 973 | 10.25 | 1207 | 38.25 |
| 5 | ತುಮಕೂರು | 10 | 9 | 10 | 2442 | **2461** | 170 | 37.5 | 124 | 1 | 4068 | 28.5 | 4362 | 67 |
| 6 | ಕೋಲಾರ | 6 | 6 | 7 | 1315 | **1328** | 39 | 14.25 | 254 | 0.75 | 1098 | 24.25 | 1391 | 39.25 |
| 7 | ಚಿತ್ರದುರ್ಗ | 6 | 4 | 4 | 297 | **305** | 160 | 2 | 9 | 12 | 890 | 39 | 1059 | 53 |
| 8 | ಶಿವಮೊಗ್ಗ | 7 | 4 | 2 | 637 | **643** | 289 | 29 | 3 | 20 | 898 | 34 | 1190 | 83 |
| 9 | ದಾವಣಗೆರೆ | 6 | 2 | 8 | 611 | **621** | 10 | 17 | 63 | 38.25 | 249 | 38.75 | 322 | 94 |
| 10 | ಮೈಸೂರು | 9 | 6 | 4 | 1301 | **1311** | 121 | 2 | 370 | 31.25 | 1119 | 39 | 1610 | 72.25 |
| 11 | ಮಂಡ್ಯ | 7 | 9 | 13 | 2099 | **2121** | 163 | 33 | 28 | 32 | 2292 | 17.5 | 2483 | 82.5 |
| 12 | ದಕ್ಷಿಣ ಕನ್ನಡ | 9 | 45 | 35 | 415 | **495** | 848 | 26 | 57 | 12.25 | 366 | 94 | 1271 | 132.3 |
| 13 | ಚಿಕ್ಕ ಮಗಳೂರು | 9 | 3 | 9 | 868 | **880** | 23 | 31.5 | 82 | 37 | 680 | 38 | 785 | 106.5 |
| 14 | ಚಾಮರಾಜನಗರ | 5 | 2 | 1 | 411 | **414** | 98 | 22.25 | 5 | 12.5 | 396 | 28 | 499 | 62.75 |
| 15 | ಕೊಡಗು | 5 | 3 | | 4 | **7** | 343 | 3.5 | 0 | 0 | 312 | 17 | 655 | 20.5 |
| 16 | ಹಾಸನ | 8 | 6 | 6 | 2444 | **2456** | 27 | 31 | 92 | 20.5 | 2256 | 21.25 | 2375 | 72.75 |
| 17 | ಉಡುಪಿ | 7 | 25 | 9 | 775 | **809** | 234 | 12 | 14 | 24 | 462 | 20 | 710 | 56 |
| 18 | ಗುಲ್ಬರ್ಗಾ | 11 | 4 | 2 | 1624 | **1630** | 173 | 8 | 73 | 2 | 1374 | 27 | 1620 | 37 |
| 19 | ಯಾದಗಿರಿ | 6 | 2 | 3 | 1207 | **1212** | 7 | 13 | 10 | 3 | 473 | 32.5 | 490 | 48.5 |
| 20 | ಬಳ್ಳಾರಿ | 5 | 4 | 4 | 653 | **661** | 64 | 25 | 6 | 29 | 853 | 35 | 923 | 89 |
| 21 | ವಿಜಯನಗರ | 6 | 10 | 7 | 621 | **638** | 588 | 37 | 37 | 26 | 2598 | 1.5 | 3223 | 64.5 |
| 22 | ರಾಯಚೂರು | 7 | 4 | 1 | 1282 | 1287 | 1044 | 21 | 5 | 6 | 202 | 14 | 1251 | 41 |
| 23 | ಕೊಪ್ಪಳ | 7 | 3 | 0 | 736 | 739 | 71 | 34 | | | 462 | 25 | 533 | 59 |
| 24 | ಬೀದರ್ | 8 | 7 | 3 | 520 | 530 | 142 | 7 | 49 | 18 | 334 | 22 | 525 | 47 |
| 25 | ಬೆಳಗಾವಿ | 15 | 5 | 6 | 3795 | 3806 | 1820 | 21.75 | 2 | 7 | 1534 | 10 | 3356 | 38.75 |
| 26 | ಬಾಗಲಕೋಟೆ | 9 | | 2 | 1164 | 1166 | 0 | 0 | 2 | 33 | 407 | 0.25 | 409 | 33.25 |
| 27 | ಉತ್ತರ ಕನ್ನಡ | 12 | 9 | 8 | 684 | **701** | 38 | 10.5 | 90 | 11.75 | 370 | 29 | 498 | 51.25 |
| 28 | ಹಾವೇರಿ | 8 | 1 | 11 | 1279 | 1291 | 2 | 38 | 7 | 14 | 735 | 37 | 744 | 89 |

| ಕ್ರಮ ಸಂಖ್ಯೆ | ಜಿಲ್ಲೆ | ಜಿಲ್ಲೆಯಲ್ಲಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆ | A | B | C | ಒಟ್ಟು ದೇವಾಲಯಗಳ ಸಂಖ್ಯೆ | A | | B | | C | | ಒಟ್ಟು | |
|---|---|---|---|---|---|---|---|---|---|---|---|---|---|---|
| 29 | ವಿಜಯಪುರ | 13 | | 1 | 550 | 551 | 0 | 0 | 4 | 0 | 142 | 11.5 | 146 | 11.5 |
| 30 | ಗದಗ್ | 7 | | | 1388 | 1388 | 0 | 0 | 0 | 0 | 762 | 4 | 762 | 4 |
| 31 | ಧಾರವಾಡ | 8 | | | 930 | 930 | 0 | 0 | 0 | 0 | 150 | 4 | 150 | 4 |
| | | 237 | 207 | 186 | 34171 | 34564 | 7643 | 1 | 1762 | 12 | 28047 | 15.8 | 37452 | 28.8 |

ಮೂಲ: ಜಿಲ್ಲಾಧಿಕಾರಿಗಳ ಕಚೇರಿಯಿಂದ ಸ್ವೀಕೃತವಾದಂತೆ ಕ್ರೋಢೀಕರಿಸಿದ ಮಾಹಿತಿ

K. Padma

ಅನುಬಂಧ-2

ಧಾರ್ಮಿಕ ಸಂಸ್ಥೆಗಳನ್ನು ಗುತ್ತಿಗೆ ನೀಡಿರುವ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಗುತ್ತಿಗೆ ನೀಡಿರುವ ಅಂಗಡಿ ಮಳಿಗೆಗಳ ಸಂಖ್ಯೆ | ಕಟ್ಟಡ | ಅತಿಥಿ ಗೃಹ | ವಿದ್ಯಾ ಸಂಸ್ಥೆಗಳು | ಮಾಸಿಕ ನಿಗಧಿಯಾಗಿರುವುದು | ವಾರ್ಷಿಕಆದಾಯ | |
|---|---|---|---|---|---|---|---|---|
| 1 | ತುಮಕೂರು | 3 | 56 | 5 | 2 | 87,400 | 10,48,800 | ಅತಿಥಿ ಗೃಹ ಕೊಠಡಿ /ಛತ್ರ ಅನುಸಾರ ದಿನ ಒಂದಕ್ಕೆ ವಿವಿಧ ದರ ನಿಗಧಿಯಾಗಿರುತ್ತದೆ. |
| 2 | ದಕ್ಷಿಣ ಕನ್ನಡ | 108 | 123 | 3 | 0 | 31,35,419 | 3,76,25,028 | |
| 3 | ವಿಜಯಪುರ | ಯಾವುದು ಇಲ್ಲ | 0 | 0 | 0 | | | |
| 4 | ಉತ್ತರ ಕನ್ನಡ | 4 | 11 | 0 | 0 | 22,010 | 2,64,120 | |
| 5 | ಯಾದಗಿರಿ | 38 | 0 | 0 | 0 | 1,03,700 | 12,44,400 | |
| 6 | ಚಿಕ್ಕಬಳ್ಳಾಪುರ | 42 | 0 | 0 | 0 | 54,600 | 6,55,200 | |
| 7 | ಬಾಗಲಕೋಟೆ | 2 | 0 | 0 | 0 | 6,000 | 72,000 | |
| 8 | ಮೈಸೂರು | 49 | 3 ಕಟ್ಟಡ 36 ಎಕರೆ 6ಗುಂಟೆ ಜಮೀನು | 0 | 0 | 0 | 0 | |
| 9 | ವಿಜಯನಗರ | 0 | 34ಕಟ್ಟಡ ಖಾಲಿ ಜಾಗ-8 ಜಮೀನು-15.23 | 5 | 0 | 5,08,374 | 61,00,488 | |
| 10 | ಚಿತ್ರದುರ್ಗ | 3 | 57 ಎಕರೆ 29 ಗುಂಟೆ ಜಮೀನು | 0 | 0 | 1,07,679 | 12,92,156 | |
| 11 | ದಾವಣಗೆರೆ | 31 | 0 | 0 | 0 | 54,919 | 6,59,028 | |
| 12 | ಚಾಮರಾಜನಗರ | 26 | 4 ಎಕರೆ 10 ಗುಂಟೆ ಜಾಗ | 0 | 0 | 29,633.33 | 3,55,600 | |
| 13 | ಹಾಸನ | 13 | 0 | 0 | 0 | 0 | 0 | |
| 14 | ಚಿಕ್ಕಮಗಳೂರು | 34 | ಖಾಲಿ ಜಾಗ-1 | 32 | 0 | 4,06,872 | 48,82,464 | |
| 15 | ಬೆಂಗಳೂರು ಗ್ರಾಮಾಂತರ | 43 | 0 | 0 | 0 | 2,10,908 | 25,30,896 | |
| 16 | ಕಲಬುರ್ಗಿ | 252 | 55 | 7 | 0 | 11,43,572 | 1,37,22,864 | |
| 17 | ಹಾವೇರಿ | ಯಾವುದು ಇಲ್ಲ | 0 | 0 | 0 | 0 | 0 | |
| 18 | ಗದಗ್ | 48 | 0 | 0 | 0 | 9,15,000 | 1,09,80,000 | |
| 19 | ಶಿವಮೊಗ್ಗ | 22 | 1 | 1 | 0 | 2,86,025 | 34,32,300 | ಅತಿಥಿ ಗೃಹ ಕೊಠಡಿ /ಛತ್ರ ಅನುಸಾರ ದಿನ ಒಂದಕ್ಕೆ ವಿವಿಧ ದರ ನಿಗಧಿಯಾಗಿರುತ್ತದೆ. |
| 20 | ಬೆಳಗಾವಿ | 484 | 0 | 0 | 0 | 24,21,862 | 2,90,62,352 | |
| 21 | ಕೋಲಾರ | 103 | 0 | 0 | 0 | 433451 | 5201412 | |
| 22 | ರಾಮನಗರ | 9 | 2 | 6 | 0 | 24,006.66 | 2,88,080 | ಅತಿಥಿ ಗೃಹ ಕೊಠಡಿ ಅನುಸಾರ ದಿನ ಒಂದಕ್ಕೆ ವಿವಿಧ ದರ ನಿಗಧಿಯಾಗಿರುತ್ತದೆ. |
| 23 | ಉಡುಪಿ | 58 | 8 | 2 ಖಾಲಿ ಜಾಗ-1 | 0 | 10,13,218.46 | 1,21,58,621.52 | |
| 24 | ಧಾರವಾಡ | ಯಾವುದು ಇಲ್ಲ | 0 | 0 | 0 | 0 | 0 | |

ಅನುಬಂಧ-2

ಧಾರ್ಮಿಕ ಸಂಸ್ಥೆಗಳನ್ನು ಗುತ್ತಿಗೆ ನೀಡಿರುವ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಗುತ್ತಿಗೆ ನೀಡಿರುವ ಅಂಗಡಿ ಮಳಿಗೆಗಳ ಸಂಖ್ಯೆ | ಕಟ್ಟಡ | ಅತಿಥಿ ಗೃಹ | ವಿದ್ಯಾ ಸಂಸ್ಥೆಗಳು | ಮಾಸಿಕ ನಿಗಧಿಯಾಗಿರುವುದು | ವಾರ್ಷಿಕಆದಾಯ | |
|---|---|---|---|---|---|---|---|---|
| 25 | ಬೆಂಗಳೂರು ನಗರ | 216 | 6 | ಪಾರ್ಕಿಂಗ್ ಜಾಗ 1 | 4 | 34,85,544 | 4,18,26,528 | |
| 26 | ಬಳ್ಳಾರಿ | 2 | | 0 | 0 | 31,183 | 3,74,200 | |
| 27 | ಮಂಡ್ಯ | 36 | 2 | 0 | 0 | 412559 | 49,50,708 | |
| 28 | ಬೀದರ್ | 188 | 7 | 0 | 0 | 0 | 0 | |
| 29 | ಕೊಪ್ಪಳ | 63 | 4 ಖಾಲಿ ಜಾಗ-56 ಜಮೀನು - 21ಎ32ಗುಂ | 0 | 0 | 16,89,847.41 | 2,02,78,169 | |
| 30 | ರಾಯಚೂರು | 41 | 2 | 1 | 1 | 3,11,294 | 37,35,528 | |
| 31 | ಕೊಡಗು | 8 | 1 | 0 | 0 | 1,26,923 | 15,23,083 | |
| ಒಟ್ಟು | | 1926 | 315 ಕಟ್ಟಡ 135ಎಕರೆ 20ಗುಂಟೆ ಜಮೀನು ಖಾಲಿ ಜಾಗ 65 | 62ಅತಿಥಿಗೃಹ ಪಾರ್ಕಿಂಗ್ ಜಾಗ 2 | 7 | 1,70,21,999.86 | 20,42,64,026 | |

K. Padma

ಆಯುಕ್ತರ ಪರವಾಗಿ

[illegible]

[illegible]

[illegible]

| ಅನುಬಂಧ-03 | | | | |
|---|---|---|---|---|
| ಕ್ರ.ಸಂ. | ಜಿಲ್ಲೆ | ಒತ್ತುವರಿ ಆಗಿರುವ ದೇವಾಲಯಗಳ ಆಸ್ತಿಗಳ ಸಂಖ್ಯೆ | ಒತ್ತುವರಿ ವಿವರ | |
| | | | ಎಕರೆ | ಗುಂಟೆ |
| 1 | ತುಮಕೂರು | 24 | 141 | 1 |
| 2 | ದಕ್ಷಿಣ ಕನ್ನಡ | 21 | 22 | 31 |
| 3 | ಯಾದಗಿರಿ | 2 | 68 | 18 |
| 4 | ಚಿಕ್ಕಬಳ್ಳಾಪುರ | 19 | 30 | 19 |
| 5 | ಬಾಗಲಕೋಟೆ | 2 | 0 | 11 |
| 6 | ಮೈಸೂರು | 3 | 5 | 36 |
| 7 | ದಾವಣಗೆರೆ | 16 | 29 | 14.5 |
| 8 | ಚಾಮರಾಜನಗರ | 28 | 101 | 15 |
| 9 | ಹಾಸನ | 28 | 107 | 21 |
| 10 | ಚಿಕ್ಕಮಗಳೂರು | 19 | 22 | 1 |
| 11 | ಹಾವೇರಿ | 1 | 2 | 23 |
| 12 | ಶಿವಮೊಗ್ಗ | 17 | 48 | 0 |
| 13 | ಉಡುಪಿ | 26 | 5 | 29 |
| 14 | ಬೆಂಗಳೂರು ನಗರ | 22 | 16 | 15 |
| 15 | ರಾಯಚೂರು | 2 | 23 | 23 |
| 16 | ಕೊಡಗು | 7 | 297 | 21 |
| 17 | ರಾಮನಗರ | 2 | 0 | 1.5 |
| ಒಟ್ಟು | | 239 | 923 | 0 |

K. Padma